ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಎಷ್ಟು ಮಕ್ಕಳು ಸಾಯುತ್ತಿದ್ದಾರೆ?

ಆ) ಇದನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಒಂದು ವರ್ಷದ 71 ಮಕ್ಕಳು ಸಾಯುತ್ತಿದ್ದಾರೆ.

ಆ) ಮಕ್ಕಳು ಸಾಯುವುದನ್ನು ಕಡಿಮೆ ಮಾಡಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಅ)ನವಜಾತು ಶಿಶುವಿನಲ್ಲಿ ಧನುರ್‌ವಾಯುವನ್ನು ತಡೆಯುವುದಕ್ಕೆ ತಾಯಿಗೆ ಧನುರ್ವಾಯು ನಿರೋಧಕ ಚುಚ್ಚುಮದ್ದು ಕೊಡಲಾಗುತ್ತಿದೆ.

ಆ)ಮಗುವಿನ ಉಳಿವಿಗಾಗಿ ಪ್ರಸವಪೂರ್ವ, ಪ್ರಸವಕಾಲ ಹಾಗೂ ಪ್ರಸವೋತ್ತರ ಸೇವೆಯನ್ನು ಮಹಿಳೆಯರಿಗೆ ಒದಗಿಸಲಾಗುತ್ತಿದೆ.

ಇ)ಅಪಕ್ವತೆ ಹಾಗೂ ಕಡಿಮೆ ತೂಕದ ಕಾರಣಗಳಿಂದ ಮಕ್ಕಳು ಸಾಯುವುದನ್ನು ತಡೆಗಟ್ಟಲು (ತಾಯಂದಿರಲ್ಲಿ ಬರುವ ರಕ್ತ ಹೀನತೆಯಿಂದ ಉಂಟಾಗುವ) ಗರ್ಭಿಣಿಯರಿಗೆ ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳನ್ನು ಕೊಡಲಾಗುತ್ತಿದೆ.

ಈ)ನಂಜಿನಿಂದ ಮಗು ಸಾಯುವುದನ್ನು ತಡೆಗಟ್ಟಲು, ನಂಜುರಹಿತ ಪರಿಗೆ ನಿರ್ವಹಿಸಲು ದಾದಿಯರಿಗೆ ತರಬೇತಿ ನೀಡಲಾಗುತ್ತಿದೆ.

ಉ)6 ಮಾರಕ ರೋಗಗಳಿಂದ ಆಗುವ ಮರಣಗಳನ್ನು ತಪ್ಪಿಸಲು ಮಕ್ಕಳಿಗೆ ವರ್ಷ ತುಂಬುವುದರೊಳಗಾಗಿ ಲಸಿಕೆಗಳನ್ನು ನೀಡಲಾಗುತ್ತಿದೆ.

ಊ)ಅತಿಸಾರ ಭೇದಿಯಿಂದಾಗುವ ಮರಣಗಳನ್ನು ತಡೆಯಲು ಅತಿಸಾರ ಭೇದಿಯಿಂದ ನರಳುವ ಮಕ್ಕಳಿಗೆ ಕೊಡಲು ಈ ಮೌಖಿಕ ಪುನರ್ಜಜೀಕರಣದ ಪೊಟ್ಟಣಗಳನ್ನು ವಿತರಿಸಲಾಗುತ್ತಿದೆ.

ಋ)ನ್ಯುಮೋನಿಯದಿಂದಾಗುವ ಮರಣಗಳನ್ನು ತಡೆಯಲು ನ್ಯೂಮೋನಿಯಾದಿಂದ ನರಳುವ ಮಕ್ಕಳುಗಳಿಗೆ 'ಕೊಟ್ರೈಮೆಕ್ಸೊಜಾಲ್' ಮಾತ್ರೆಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1991-92ನೆ ಇಸವಿಯಿಂದ ಕೊಡಲಾಗುತ್ತಿದೆ.

ಋೂ)ತಾಯಿ ಮತ್ತು ಮಕ್ಕಳಲ್ಲಿ ಸಂಭವಿಸಬಹುದಾದ ಸಾವುಗಳನ್ನು ತಪ್ಪಿಸಲು 'ಮಕ್ಕಳ ಉಳಿಮೆ ಮತ್ತು ಸುರಕ್ಷಿತ ತಾಯ್ತನ' ಎಂಬ ಹೊಸ ಕಾರ್ಯಕ್ರಮವನ್ನು 1992 ಏಪ್ರಿಲ್ ತಿಂಗಳಿಂದ 7 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು. ನಂತರ ಕ್ರಮವಾಗಿ ಉಳಿದ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು.

ಎ)ಪೌಷ್ಟಿಕ ಆಹಾರ, ಲಸಿಕಾ ಕಾರ್ಯಕ್ರಮ ಹಾಗೂ ಮಕ್ಕಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಾದ ಅತಿಸಾರ ಭೇದಿ ನ್ಯೂಮೋನಿಯಾದ ಬಗ್ಗೆ ಕಾಳಜಿ ಮಹಿಸುವ ಕುರಿತು ತಾಯಂದಿರಿಗೆ ಆರೋಗ್ಯ ಶಿಕ್ಷಣದ ಮುಖಾಂತರ ಮಾಹಿತಿ ನೀಡಲಾಗುತ್ತಿದೆ.

ಶಾಸನಾತ್ಮಕ ನಿರ್ಣಯ

ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ.

ಉಪಾಧ್ಯಕ್ಷಿಣಿಯವರು:- 1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1992ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಅನುಮತಿ ನೀಡಬೇಕೆಂದು ಸಭೆಯ ಮುಂದಿರುವ ಪ್ರಸ್ತಾವ :

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)